ಸಾಕ್ಷಿಗೆ ದಿನಾಂಕಃ **13.09.2024** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಆರೋಪಿತರ ಪರ ಃಶ್ರೀ. ಕೆ ಎಸ್ ಎಸ್ ವಕೀಲರಿಂದ

ನಾನು ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ನ ರಾ ಪುರದಲ್ಲಿ ವಿದ್ಯಾಭ್ಯಾಸ ಮಾಡಿರುತ್ತೇನೆ. ಫ್ರಾಸಾ-2 ಸಹ ಇಲ್ಲೆ ನ ರಾ ಪುರದಲ್ಲಿ ವಿದ್ಯಾಭ್ಯಾಸ ಮಾಡಿರುತ್ತಾನೆ. ನಾವು ಮೂಲತಃ ಕೊಡಗು ಜಿಲ್ಲೆ ಎಂದರೆ ಸರಿ. ನಮ್ಮ ತಂದೆ ವಾಚರ್ ಆಗಿ ನ ರಾ ಪುರದಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ ಎಂದರೆ ಸರಿ. ಸುಮಾರು 25 ವರ್ಷದಿಂದ ನಾವು ಸುಗ್ಗಪ್ಪನ ಮಠದ ಹತ್ತಿರ ವಾಸವಾಗಿರುತ್ತೇವೆ. ನಾವು 25 ವರ್ಷಗಳಿಂದ ವಾಸವಾಗಿದ್ದರಿಂದ ಅಕ್ಕಪಕ್ಕದವರು ನಮಗೆ ಪರಿಚಯರಾಗಿದ್ದು, ಅವರ ಜೊತೆ ವಿಶ್ವಾಸದಿಂದ ಇದ್ದೇವೆಂದರೆ ಸರಿ. ನನ್ನ ತಂದೆ ಕರ್ತವ್ಯದಲ್ಲಿರುವಾಗಲೇ ಮರಣ ಹೊಂದಿದ್ದರಿಂದ ನನಗೆ ಅನುಕಂಪದ ಆಧಾರದ ಮೇಲೆ ಕೆಲಸ ಸಿಕ್ಕಿರುತ್ತದೆ ಎಂದರೆ ಸರಿ.

1 ರಿಂದ 3 ನೇ ಆರೋಪಿತರು ಸುಗ್ಗಪ್ಪನ ಮಠದ ಹತ್ತಿರ ವಾಸವಾಗಿರುತ್ತಾರೆ. 5 ನೇ ಆರೋಪಿ ಮುತ್ತಿನಕೊಪ್ಪದ ವಾಸಿ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 4 ನೇ ಆರೋಪಿ ಹೌಸಿಂಗ್ ಬೋರ್ಡ್ ನಲ್ಲಿ ಮುಂಚೆ ವಾಸವಾಗಿದ್ದು ಪ್ರಸ್ತುತ ತರೀಕೆರೆಯಲ್ಲಿ ವಾಸವರಾಗಿರುತ್ತಾರೆಂದರೆ ಸರಿ. 1 ನೇ ಆರೋಪಿತರ ತಂದೆ ತೀರಿಕೊಂಡಿರುತ್ತಾರೆಂದರೆ ಸರಿ. 1 ನೇ ಆರೋಪಿಯ ಹೆಂಡತಿ ತೀರಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-3 ನಮ್ಮ ಸಿಬ್ಬಂದಿ ವರ್ಗದವರು ಎಂದರೆ ಸರಿ. ಫ್ರಾಸಾ-2 ರಾವೂರಿನಲ್ಲಿ ದಿನಗೂಲಿ ಕೆಲಸ ಮಾಡುತ್ತಾನೆ. ನನಗೆ ಚಾಸಾ-5 ಸುಮಾರು 15 ವರ್ಷಗಳಿಂದ ಪರಿಚಯ.

ಚಾಸಾ-6 ಚಾಸಾ-3 ರವರ ತಂದೆ ಎಂದರೆ ಸರಿ. ನಮ್ಮ ಮನೆಯಿಂದ ಚಾಸಾ-6 ರವರ ಮನೆ ಸುಮಾರು 200 ಮೀ ದೂರ ಆಗುತ್ತದೆ. ಅವರ ಮನೆ ಮತ್ತು ನಮ್ಮ ಮನೆಯ ಮಧ್ಯೆ5 ಮನೆಗಳು ಇವೆ. ಚಾಸಾ-5 ರವರ ಮನೆ ನಮ್ಮ ಮನೆಯಿಂದ ಒಂದು

ಮನೆ ಬಿಟ್ಟು ಇರುತ್ತದೆ. ಚಾಸಾ-7 ರವರ ಮನೆ ನಮ್ಮ ಮನೆಯಿಂದ 2 ಎರಡು ಮನೆಗಳ ನಂತರ ಇರುತ್ತದೆ.

ನಮ್ಮ ಇಲಾಖೆಯ ವಲಯ ಕಚೇರಿ ಉಂಬಳೇಬೈಲಿನಲ್ಲಿರುತ್ತದೆ. ನಾವು ಹಾಜರಾತಿಯನ್ನು ಫೋನ್ ಮೂಲಕ ತಿಳಿಸುತ್ತೇವೆ. ನಮ್ಮ ಕಚೇರಿಯಲ್ಲಿ ಚಲನವಲನ ವಹಿ ಇರುತ್ತದೆ.ಸದರಿ ಚಲನವಲನ ವಹಿಯಲ್ಲಿ ನಾವು ಎಲ್ಲೆಲ್ಲಿ ಹೋಗುತ್ತೇವೆಂದು ಬರೆಯಬೇಕು ಎಂದರೆ ಸರಿ. ನಮ್ಮ ಚಲನವಲನ ವಹಿಯನ್ನು ತಿಂಗಳಿಗೊಮ್ಮೆ ಕಚೇರಿಗೆ ಕಳುಹಿಸುತ್ತೇವೆ. ನಮ್ಮ ವಲಯದಲ್ಲಿ ಅಪರಾಧವಾದಾಗ ಪ್ರ ವ ವರದಿಯನ್ನು ನಾವೇ ಹಾಕುತ್ತೇವೆ. ಸಾಕ್ಷಿ ಮುಂದುವರೆದು ಆರ್ ಎಫ್ ಓ ಸಮ್ಮುಖದಲ್ಲಿ ಅವರು ಹೇಳಿದಂತೆ ಪ್ರ ವ ವರದಿ ಬರೆಯುತ್ತೇವೆಂದು ನುಡಿಯುತ್ತಾರೆ. ಅಪರಾಧಕ್ಕಾಗಿ ಬಳಸಿರುವ ಮುದ್ದೆಮಾಲುಗಳನ್ನು ಮಹಜರ್ ಮಹಜರ್ ಮೂಲಕ ಜಪ್ತು ಮಾಡಿಕೊಳ್ಳಬೇಕು ಎಂದರೆ ಸರಿ. ಅದೇ ರೀತಿ ಮರಗಳನ್ನು ಕಡಿದಿದ್ದರೂ ಸಹ ಮಹಜರ್ ಮಾಡಿ ಮಹಜರ್ ಮೂಲಕ ಜಪ್ತು ಮಾಡಬೇಕು ಎಂದರೆ ಸರಿ.

ನಾನು ಹೇಳಲಾದ ಘಟನಾ ದಿನವು ಬೆಳಗ್ಗೆ 8.30 ಕ್ಕೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ನನ್ನ ಡೈರಿ ಪ್ರಕಾರ ನಾನು ಆ ದಿನ ಬೆಳಗ್ಗೆ 10 ರಿಂದ 10.45 ಮಧ್ಯದಲ್ಲಿ ಕರ್ತವ್ಯದಿಂದ ಬಿಡುಗಡೆ ಆಗಿರುತ್ತೇನೆ. ನಮ್ಮ ಇಲಾಖೆಯಲ್ಲಿ ಇಂತಿಷ್ಟು ಅವಧಿವರೆಗೆ ಕರ್ತವ್ಯ ನಿರ್ವಹಿಸಬೇಕು ಎಂದು ನಿಗದಿಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಮೇಲಾಧಿಕಾರಿಗಳು ಯಾವ ರೀತಿ ಸೂಚನೆ ಕೊಡುತ್ತಾರೋ ಆ ರೀತಿ ಕೆಲಸ ಮಾಡಿಕೊಂಡು ಹೋಗುತ್ತೇವೆ. ಹೇಳಲಾದ ಕೃತ್ಯ ಸ್ಥಳದಿಂದ ನಮ್ಮ ಮನೆ 200 ಮೀ ಆಗಿರುತ್ತದೆ. ನಾವು ಯಾವ ಯಾವ ಕರ್ತವ್ಯದಲ್ಲಿ ಎಲ್ಲೆಲ್ಲಿ ಹೋಗಿರುತ್ತೇವೆಂದು ಚಲನವಲನ ಪುಸ್ತಕದಲ್ಲಿ ಬರೆದಿರುತ್ತೇವೆ. ನಾವು ನೆಡುತೋಪುಗಳಲ್ಲಿ ಗಿಡ ನೆಡಲು, ಟ್ರೆಂಚ್ ಹೊಡೆಯಲು, ಟ್ಯಾಕ್ಟರ್ ಕೆಲಸಕ್ಕೆ ದಿನಗೂಲಿ ನೌಕರರನ್ನು ನೇಮಕ ಮಾಡಿಕೊಳ್ಳುತ್ತೇವೆಂದರೆ ಸರಿ. ಸದರಿ ದಿನಗೂಲಿ ನೌಕರರನ್ನು ನೇಮಕ ಮಾಡಿಕೊಳ್ಳಲು ತಾತ್ಕಾಲಿಕ ವಹಿಯನ್ನು ಇಟ್ಟಿರುತ್ತೇವೆ. ಸದರಿ ತಾತ್ಕಾಲಿಕ ವಹಿಯನ್ನು ಮೇಲಾಧಿಕಾರಿಗಳಿಗೆ ಕಳುಹಿಸಿ ಕೂಲಿಯನ್ನು

ಕೊಡುತ್ತೇವೆಂದರೆ ಸರಿ. ಹೆಸರುಗಳ ಮೇಲೆ ಕೂಲಿ ನೀಡುವುದಿಲ್ಲ, ಆಳುಗಳ ಅಂಕೆ ಸಂಖ್ಯೆ ಮೇಲೆ ಕೂಲಿ ನೀಡುತ್ತೇವೆ. ನಾವು ಯಾವುದೇ ವೋಚರ್ ಮೇಲೆ ದಿನಗೂಲಿ ನೌಕರರ ಸಹಿ ಪಡೆದು ಕೂಲಿಯನ್ನು ನೀಡುವುದಿಲ್ಲ. ನಮಗೆ ದಿನಗೂಲಿ ಜನರು ಎಲ್ಲಿ ಸಿಗುತ್ತಾರೋ ಅಲ್ಲಿಂದ ನಾವು ಆಳುಗಳನ್ನು ನೇಮಕ ಮಾಡಿಕೊಳ್ಳುತ್ತೇವೆ.

ಘಟನೆ ನಡೆಯಿತು ಎನ್ನಲಾದ ಸ್ಥಳ ನೀಲಗಿರಿ ನೆಡುತೋಪು ನಲ್ಲಿ ಜನಸಂದಣಿ ಇರುತ್ತದೆ ಎಂದರೆ ಸರಿ. ನಮ್ಮ ನೀಲಿಗಿರಿ ನೆಡುತೋಪಿನಲ್ಲಿ ಆರೋಪಿತರು ಮತ್ತು ಅವರ ತಂದೆ-ತಾಯಿಗಳು ಆಳುಗಳಾಗಿ ಕೆಲಸ ಮಾಡಿಕೊಂಡಿರುತ್ತಾರೆಂದರೆ ಸರಿ. ನಾನು ಕರ್ತವ್ಯದ ವೇಳೆಯಲ್ಲಿ ಮದ್ಯಪಾನ ಮಾಡಿಕೊಂಡು ಸಾರ್ವಜನಿಕರಿಗೆ ಬಯ್ಯುವುದು ಮಾಡುತ್ತಿದ್ದೆ ಎಂದು ನನ್ನ ಮೇಲೆ ಆಪಾದನೆ ಇರುತ್ತದೆ ಎಂದರೆ ಸರಿಯಲ್ಲ. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿರುತ್ತೇನೆಂದು ನ ರಾ ಪುರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು ಅದಕ್ಕೆ ನಾನು ದಂಡ ಕಟ್ಟಿರುತ್ತೇನೆಂದರೆ ಸರಿ. ನಾನು ಮದ್ಯಪಾನ ಮಾಡಿಕೊಂಡು ಸಾರ್ವಜನಿಕರಿಗೆ ಬಯ್ಯುವುದನ್ನು ಆರೋಪಿತರು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ನನ್ನ ತಾಯಿ ಆಳುಗಳನ್ನು ತನಗೆ ಇಷ್ಟಾಚಾರ ಕರೆಸಿಕೊಳ್ಳುವುದು, ಟ್ರ್ಯಾಕ್ಟರ್ ಗಳನ್ನು ಕರೆಸಿಕೊಂಡು ಕೆಲಸ ಮಾಡಿಕೊಂಡು ಸರಿಯಾದ ಕೂಲಿ ಹಣ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ಆರೋಪಿತರು ನನ್ನ ಮೇಲಾಧಿಕಾರಿಗಳ ಗಮನಕ್ಕೆ ತಂದಿರುತ್ತಾರೆಂದರೆ ಸರಿಯಲ್ಲ.

ಹೇಳಲಾದ ಕೃತ್ಯ ಸ್ಥಳವಾದ ನೀಲಗಿರಿ ನೆಡುತೋಪಿನಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ಘಟನಾ ಸ್ಥಳದಲ್ಲಿ ಟ್ರ್ಯಾಕ್ಟರ್, ಗರಗಸ, ಕತ್ತಿ , ಬೆಳಕಿನ ಸಾಧನಗಳು ಕಂಡು ಬಂದಿರುವುದಿಲ್ಲ ಎಂದರೆ ಸರಿ. ಸದರಿ ವಸ್ತುಗಳನ್ನು ನಮ್ಮ ಇಲಾಖೆಯವರು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ನಾವು ಪಂಚರ ಸಮಕ್ಷಮ ಘಟನಾ ಸ್ಥಳದಲ್ಲಿ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮಹಜರ್ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸಾಕ್ಷಿಯು ಕಚೇರಿಗೆ ನೀಡಿರುತ್ತೇವೆಂದು ನುಡಿಯುತ್ತಾರೆ. ಟ್ರ್ಯಾಕ್ಟರ್ ಬೇರೆ ಟ್ರಾಲಿ ಬೇರೆ

ಇರುತ್ತದೆ ಎಂದರೆ ಸರಿ. ಸದರಿ ಹೇಳಲಾದ ಕೃತ್ಯಕ್ಕೆ ಬಳಸಿರುವ ಟ್ರ್ಯಾಕ್ಟರನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿ.

ಹೇಳಲಾದ ಸ್ಥಳದಲ್ಲಿ ಮರ ಕಡಿದಿರುವ ಬಗ್ಗೆ ಮಹಜರ್ ಮಾಡಿ ಪೋಟೋವನ್ನು ತೆಗೆದಿರುವುದಿಲ್ಲ ಎಂದರೆ ಸರಿ. ಆರೋಪಿತರು ನನ್ನನ್ನು ಬೈದಿರುವ ಸಂಬಂಧ ನಾನು ಮೇಲಾಧಿಕಾರಿಗಳಿಗೆ ಮೌಖಿಕವಾಗಿ ತಿಳಿಸಿ ನಂತರ ಲಿಖಿತವಾಗಿ ಬರೆದುಕೊಟ್ಟಿರುತ್ತೇನೆ. ಆ ನಂತರ ಮೇಲಾಧಿಕಾರಿಗಳು ಪ್ರ ವ ವರದಿ ದಾಖಲು ಮಾಡಲು ತಿಳಿಸಿರುತ್ತಾರೆ. ನಿಪಿ-1 ದೂರನ್ನು ನಾನೇ ಬರೆದಿರುತ್ತೇನೆ. ನಾನು ಆಸ್ಪತ್ರೆಗೆ ಹೋಗಿ ನಂತರ ನಿಪಿ-1 ದೂರು ನೀಡಿರುತ್ತೇನೆ. ನಾನು ವೈದ್ಯಾಧಿಕಾರಿಗಳ ಹತ್ತಿರ ಹಲ್ಲೆ ಬಗ್ಗೆ ತಿಳಿಸಿರುತ್ತೇನೆ. ಸದರಿ ಸಮಯದಲ್ಲಿ ಪೊಲೀಸರು ಆಸ್ಪತ್ರೆಗೆ ಬಂದಿರುತ್ತಾರೆ. ಆ ಸಮಯದಲ್ಲಿ ನನ್ನ ಹೇಳಿಕೆ ಪಡೆದುಕೊಂಡ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ.

ನಾನು ಠಾಣೆಗೆ ಬೆಳಗ್ಗೆ 12 ಗಂಟೆಗೆ ದೂರು ನೀಡಲು ಹೋಗಿರುತ್ತೇನೆ. ನಾನು ದೂರು ನೀಡಿದ ಒಂದು ದಿನದ ನಂತರ ಪೊಲೀಸರು ಸ್ಥಳಕ್ಕೆ ಬರುತ್ತೇವೆಂದು ಪೋನ್ ಮಾಡಿರುತ್ತಾರೆ. ಮಹಜರ್ ಮಾಡುವಾಗ ಪೋಟೋವನ್ನು ದಿಲೀಪ್ ಪಿಎಸ್ ಐ ರವರು ತೆಗೆದಿರುತ್ತಾರೆ. ಕೃತ್ಯ ನಡೆಯಿತು ಎಂದು ಹೇಳಲಾದ ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿ ಪೋಟೋ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಮೊದಲಿಗೆ ಪೊಲೀಸರು ನಮ್ಮ ಮನೆ ಮುಂದೆ ಮಹಜರ್ ಮಾಡಿ ನಂತರ ನೀಲಿಗಿರಿ ನೆಡುತೋಪಿನಲ್ಲಿ ಮಹಜರ್ ಮಾಡಿರುತ್ತಾರೆ. ಮಹಜರಿನಲ್ಲಿ ಬರೆದಿರುವ ಸಂಪೂರ್ಣ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ಮಹಜರನ್ನು ಯಾರು ಬರೆದಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ಮಹಜರಿಗೆ ಯಾರು ಯಾರು ಸಹಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಆರೋಪಿತರು ನಮ್ಮ ಮನೆ ಹತ್ತಿರ ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಅವರ ತಂದೆ-ತಾಯಂದಿರು ನಮ್ಮ ಹತ್ತಿರ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದು ಅವರ ಬಳಿ ನನ್ನ ತಾಯಿ ಹೆಚ್ಚಿನ ಕೆಲಸ ತೆಗೆದುಕೊಂಡು ಸರಿಯಾಗಿ ಹಣ ನೀಡದೆ ಇರುವುದರಿಂದ ಆರೋಪಿತರು ಮೇಲಾಧಿಕಾರಿಗಳಿಗೆ ತಿಳಿಸಿದ್ದರಿಂದ ಮತ್ತು ನಾನು ಮದ್ಯಪಾನ ಮಾಡಿಕೊಂಡು ಕೂಲಿ

ಹಣ ಬಗ್ಗೆ ಆರೋಪಿತರಿಗೆ ಅಸಭ್ಯವಾಗಿ ವರ್ತನೆ ಮಾಡಿರುವ ವಿಚಾರ ಆರೋಪಿತರು ಮೇಲಾಧಿಕಾರಿಗಳಿಗೆ ತಿಳಿಸಿದ್ದರಿಂದ ಆರೋಪಿತರು ನನಗೆ ಯಾವುದೇ ಹಲ್ಲೆ ಮಾಡದಿದ್ದರೂ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿನಗೂಲಿ ನೌಕರರನ್ನು ನೇಮಕ ಮಾಡುವುದು ಮತ್ತು ಅವರಿಗೆ ಕೂಲಿ ಹಣ ನೀಡುವ ಕೆಲಸ ನನ್ನ ತಾಯಿ ಕೈಯಲ್ಲಿರುತ್ತದೆ ಎಂದರೆ ಸರಿಯಲ್ಲ. ನನ್ನ ತಾಯಿ ಆರೋಪಿತರು ಮತ್ತು ಅವರ ತಂದೆ-ತಾಯಿ ಜೊತೆ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಾಯಿ, ನಾನು ಹಾಗೂ ನನ್ನ ತಮ್ಮ ದಿನಗೂಲಿ ನೌಕರರ ಪಟ್ಟಿಯ ಪುಸ್ತಕದಲ್ಲಿ ಆಳುಗಳ ಅಂಕೆ ಸಂಖ್ಯೆ ಜಾಸ್ತಿ ತೋರಿಸಿ ಕಡಿಮೆ ಆಳುಗಳಿಂದ ಕೆಲಸ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ಹೆಚ್ಚು ಅಂಕೆ ಸಂಖ್ಯೆ ತೋರಿಸಿರುವ ಆಳುಗಳ ದಿನಗೂಲಿ ಹಣವನ್ನು ನಾವು ಬಳಸಿಕೊಳ್ಳುತ್ತಿದ್ದೆವು ಎಂದರೆ ಸರಿಯಲ್ಲ.

ನಾವು ಪ್ರ ವ ವರದಿ ದಾಖಲು ಮಾಡಿದ ನಂತರ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ನಾನು ಸದರಿ ಪ್ರಕರಣದಲ್ಲಿ ಪ್ರ ವ ವರದಿಯನ್ನು ದಿನಾಂಕಃ 26.04.2020 ರಂದು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುತ್ತೇನೆ. ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಅವರ ಮೇಲೆ ದ್ವೇಷ ಇಟ್ಟುಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೊಲೀಸರು ಯಾವುದೇ ಮಹಜರ್ ಮಾಡಿರುವುದಿಲ್ಲ ನಾನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಪೋಟೋಗಳನ್ನು ತೆಗೆದಿರುವುದಿಲ್ಲ ಅವುಗಳನ್ನು ಸೃಷ್ಟಿಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ.

ಃಃ ಮರು ವಿಚಾರಣೆ ಇಲ್ಲಃಃ

**(ದಿನಾಂಕಃ 13.09.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ